

ಬಾತುಕೋಳಿಯಂತಹ ಹಕ್ಕಿಗಳು.



ಕಾರ್‌ಮೊರೆಂಟ್ ಫಿಷಿಂಗ್ ಕುರಿತ ಪುರಾತನ ಜಪಾನಿ ಚಿತ್ರಕಲೆ.

ಸುಮಾರು ಹನ್ನೆರಡು ಮೀಟರ್ ಉದ್ದವಾಗಿದೆ. ದೋಣಿಯಲ್ಲಿ ಎರಡರಿಂದ ಮೂರು ಜನ ಮಾತ್ರ ಇರುತ್ತಾರೆ. ಈ ದೋಣಿಗಳು ಯಾವುದೇ ಯಾಂತ್ರಿಕತೆ ಹೊಂದಿರುವುದಿಲ್ಲ. ದೋಣಿಯ ಮುಂಭಾಗ ಹಾಗೂ ಮೇಲ್ಭಾಗ ದೊಡ್ಡದಾಗಿ ಬೆಂಕಿ ಹಾಕುವ ಪಂಜರದಂತಿದ್ದು, ಓರ್ವ ಸಹಾಯಕನು ಸದಾ ಬೆಂಕಿ ಹೊತ್ತಿಸುವತ್ತಲೇ ಗಮನ ಹರಿಸುತ್ತಿರುತ್ತಾನೆ. ಮೀನುಗಳನ್ನು ಆಕರ್ಷಿಸಲೆಂದೇ ಈ ಬೆಂಕಿ ಉರಿಸಲಾಗುತ್ತದಂತೆ. ಇದು ಹಕ್ಕಿಗಳಿಗೂ ನೀರಿನೊಳಗಿನ ಮೀನುಗಳನ್ನು ಗುರುತಿಸುವಲ್ಲಿ ಸಹಾಯಕಾರಿ.

ಇನ್ನೋರ್ವ ಸಹಾಯಕ ದೋಣಿಯನ್ನು ನಿಧಾನ ಮುನ್ನಡೆಸುತ್ತಿರುತ್ತಾನೆ. ಮೂರನೆಯ ವ್ಯಕ್ತಿ ಮುಖ್ಯ ಮೀನುಗಾರನಾಗಿದ್ದು, ಈತ ದೊಡ್ಡದಾದ ಬುಟ್ಟಿಗಳಲ್ಲಿ ತಂದ ಹಕ್ಕಿಗಳನ್ನು ಒಂದರ ಹಿಂದೆ ಒಂದರಂತೆ ನೀರಿನಲ್ಲಿ ಬಿಡುತ್ತಾನೆ. ಓರ್ವ ಚಾಣಾಕ್ಷ ಮೀನುಗಾರ ಒಂದೇ ಬಾರಿಗೆ 10–12 ಹಕ್ಕಿಗಳನ್ನು ನಿಯಂತ್ರಿಸಬಲ್ಲ.

ಈ ಹಕ್ಕಿಗಳು ನೀರಿನಲ್ಲಿ ಇಳಿಯುತ್ತಿದ್ದಂತೆ ಅತ್ಯಂತ ವೇಗವಾಗಿ ತಮ್ಮ ಜಾಲ–ಪಾದಗಳನ್ನು ಬೀಸುತ್ತ, ನೀರಿನ ತಳಭಾಗದತ್ತ ಸಾಗಿ, ಮೀನುಗಳನ್ನು ಬೇಟೆ–ಯಾಡಿ, 3 ರಿಂದ 4 ನಿಮಿಷಗಳಲ್ಲಿ ಮರಳುತ್ತವೆ. ಮೀನುಗಾರರ ಪ್ರಕಾರ ಈ ಹಕ್ಕಿಗಳು ತಾವು ಹಿಡಿದು ತರುವ ಮೀನುಗಳ ಲೆಕ್ಕವನ್ನಿಟ್ಟುಕೊಳ್ಳುತ್ತವೆ! ಅಂತೆಯೇ ಮೀನುಗಾರಿಕೆ ನಡೆಸುವಾಗ, ಆಗಾಗ ಇವುಗಳ ಯಜಮಾನ ಕುತ್ತಿಗೆಯಲ್ಲಿ ಕಟ್ಟಿರುವ ಕುಣಿಕೆ ಸಡಲಿಸಿ, ಒಂದೆರಡು ಚಿಕ್ಕ ಮೀನುಗಳನ್ನು ತಿನ್ನಲು ನೀಡುತ್ತಾನೆ. ಇಲ್ಲದಿದ್ದಲ್ಲಿ ಇವುಗಳು ಮೀನು ಬೇಟೆ ಮಾಡುವುದಿಲ್ಲ ಎಂದು ಪ್ರೊ. ಮತ್ಸುರಾರವರು ವಿವರಿಸಿದಾಗ ನನಗೆ ಅತ್ಯಾಶ್ಚರ್ಯ!

ಜಪಾನ್‌ನ ನಗಾರಾ ಸೇರಿದಂತೆ ಇನ್ನೂ ಕೆಲ ಪ್ರದೇಶಗಳಲ್ಲಿ ಈ ಮೀನು–ಗಾರಿಕೆ ದೇಶ ವಿದೇಶಗಳ ಪ್ರವಾಸಿಗರಿಗೆ ಒಂದು ಪ್ರಮುಖ ಆಕರ್ಷಣೆಯಾಗಿದೆ. ಪ್ರವಾಸಿಗರು ಸಂಜೆಯ ಸಮಯದಲ್ಲಿ ಅಪಾರ ಸಂಖ್ಯೆಯಲ್ಲಿ ನದಿ ತೀರಗಳತ್ತ ಜಮಾಯಿಸಿರುತ್ತಾರೆ. ಇದನ್ನು ಇನ್ನೂ ಹತ್ತಿರದಿಂದ ನೋಡಬಯಸುವ ಪ್ರವಾಸಿಗರಿಗೆ ಪ್ರತ್ಯೇಕ ದೋಣಿಗಳ ವ್ಯವಸ್ಥೆಯೂ ಇದ್ದು, ಒಬ್ಬರಿಗೆ ಟಿಕೆಟ್ ದರ 3200 ಯೆನ್ನುಗಳು (ಸುಮಾರು 2200 ರೂಪಾಯಿ) ಹಾಗೂ ಮಕ್ಕಳಿಗೆ ಇದರ ಅರ್ಧ ದರ. ಮಧ್ಯರಾತ್ರಿವರೆಗೂ ಇದು ನಡೆಯುತ್ತದೆ. ಹೀಗಾಗಿ ಒಂದು ಬಗೆಯ ಹಬ್ಬದ ವಾತಾವರಣ ಸೃಷ್ಟಿಯಾಗಿರುತ್ತದೆ. ಈ ತಾಜಾ ಮೀನುಗಳಿಂದ ತಯಾರಾದ ವಿವಿಧ ಬಗೆಯ ಭಕ್ಷ್ಯಗಳೂ ಇಲ್ಲಿ ಲಭ್ಯ.

'ಹಿಕಾಯಿ' ಮೀನುಗಾರಿಕೆಯಲ್ಲಿ ಪ್ರಮುಖ ಪಾತ್ರ ವಹಿಸುವ 'ಕಾರ್‌ಮೊರೆಂಟ್' (ಬಾತುಕೋಳಿಯಂತಹ ಹಕ್ಕಿಗಳು) ಇಲ್ಲಿನ ಸಮುದ್ರ ತೀರಗಳಲ್ಲಿ ಸಾಮಾನ್ಯ. ಅವುಗಳ ಆಯುಷ್ಯ 4–5 ವರ್ಷಗಳು ಮಾತ್ರ. ಆದರೆ ಮೀನುಗಾರರು ಈ ಹಕ್ಕಿಗಳನ್ನು ತಮ್ಮ ಕುಟುಂಬದ ಒಬ್ಬ ಸದಸ್ಯನಂತೆ ಸಾಕುವುದರಿಂದ 18–20 ವರ್ಷಗಳವರೆಗೂ ಬದುಕಬಲ್ಲವು.

ಜಪಾನ್‌ನಲ್ಲಿ ಈ ಮೀನುಗಾರಿಕೆಯ ಮೊದಲ ಹಾಗೂ ಕೊನೆಯ ದಿನದಂದು ಮೀನುಗಾರರು ನದಿ ಪ್ರದೇಶಕ್ಕೆ ವಿಶೇಷ ಪ್ರಾರ್ಥನೆ ಸಲ್ಲಿಸುತ್ತಾರೆ. ಜಪಾನ್‌ಗೆ ಭೇಟಿ ನೀಡುವ ವಿಶ್ವದ ಗಣ್ಯರು 'ಕಾರ್‌ಮೊರೆಂಟ್' ಮೀನುಗಾರಿಕೆ ನೋಡಲು ಮರೆಯುವುದಿಲ್ಲ.

ಪ್ರಸಿದ್ಧ ನಟ, ನಿರ್ದೇಶಕ ಚಾರ್ಲಿ ಚಾಪ್ಲಿನ್ ಈ ನಗಾರಾ ನದಿಗೆ ಮೀನು–ಗಾರಿಕೆ ವೀಕ್ಷಿಸಲೆಂದೇ ಎರಡು ಬಾರಿ ಭೇಟಿ ನೀಡಿದ್ದನಂತೆ. ಮೀನುಗಾರರ ಚಾಣಾಕ್ಷತನವನ್ನು ಬಹುವಾಗಿ ಶ್ಲಾಘಿಸಿದ್ದ ಎನ್ನುವ ಬಗ್ಗೆ ಪ್ರೊ. ಮತ್ಸುರಾ ವಿವರಿಸಿದರು. ಇಷ್ಟೆಲ್ಲಾ ಆಧುನಿಕತೆ ಬಂದಿದ್ದರೂ, ಈ ಸಾಂಪ್ರದಾಯಿಕ ಮೀನುಗಾರಿಕೆಯಲ್ಲಿ ಒಂದಿನಿತೂ ವ್ಯತ್ಯಾಸವಾಗದಂತೆ, ಪ್ರಾಚೀನ ಶೈಲಿ–ಯಲ್ಲಿಯೇ ಮೀನುಗಾರಿಕೆ ನಡೆಸುತ್ತಿರುವುದು ನಿಜಕ್ಕೂ ಆಶ್ಚರ್ಯವೇ ಸರಿ. ಇಂತಹ ವಿಧಾನವನ್ನು ನಮ್ಮ ಮೀನುಗಾರರೂ ಸ್ಥಳೀಯವಾಗಿ ಲಭ್ಯವಿರುವ ಬಾತುಕೋಳಿಗಳಿಂದಲೂ ಪ್ರಯತ್ನಿಸಬಹುದು. ಜಪಾನ್, ಚೀನಾ ಮುಂತಾದೆಡೆಗಳಲ್ಲಿ ಪ್ರವಾಸಿಗರನ್ನು ಬಹುವಾಗಿ ಆಕರ್ಷಿಸುವ ಇದು, ನಮ್ಮ ಕರಾವಳಿಗಳಲ್ಲೂ ಸಾಧ್ಯವಾದಲ್ಲಿ, ಇನ್ನೊಂದು ಪ್ರಮುಖ ಆಕರ್ಷಣೆಯಾಗು–ವುದರಲ್ಲಿ ಯಾವುದೇ ಸಂದೇಹವಿಲ್ಲ.